

## ಪ್ರಾರ್ಥನೆ

ಅಯ್ಯಾ ನೀನೆನಗೆ ಗುರುವಪ್ಪಡೆ, ನಾ ನಿನಗೆ ಶಿಷ್ಯನಪ್ಪಡೆ
ಎನ್ನ ಕಾಯದ ಕರ್ಮವ ತೊಡೆದು, ಎನ್ನ ಪ್ರಾಣದ ಧರ್ಮವ ನಿಲಿಸಿ
ನೀನೆನ್ನ ಕಾಯದಲಡಗಿ ನೀನೆನ್ನ ಪ್ರಾಣದಲಡಗಿ
ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು
ಕಾರುಣ್ಯವ ಮಾಡಾ ಗುಹೇಶ್ವರಾ —ಅಲ್ಲಮಪ್ರಭು

ಗುರುವಿಗೆ ಸಲ್ಲಿಸುವ ಪ್ರಾರ್ಥನೆಯಿದು. ಶರೀರ, ಪ್ರಾಣ, ಇಂದ್ರಿಯಗಳನ್ನು ಶುದ್ಧಗೊಳಿಸಿ, ನಿರ್ಮಲ ಚಿತ್ತವನ್ನು ಕರುಣಿಸು. ನಾನು ನಿನ್ನ ಶಿಷ್ಯನಾದೊಡೆ ನೀನು ನನ್ನ ಗುರುವಾದೊಡೆ, ನೀನು ನನ್ನಲ್ಲಿ ಕರುಣೆಯನ್ನು ತೋರಲೇಬೇಕು. ನನ್ನ ಭಾವನೆಗಳೆಲ್ಲ ನಿನ್ನಲ್ಲಿ ಅಡಗಿ, ನಿನ್ನ ಸಾಮೀಪ್ಯವನ್ನು ಅನುಭವಿಸುವಂತೆ ದಯೆತೋರು.

## ಸೂಕ್ತಿಪ್ರಭ

ಜೀವ ಜಡರೂಪ ಪ್ರಪಂಚವನದಾವುದೋ
ಆವರಿಸಿಕೊಂಡುಮೊಳನೆರೆದುಮಿಹುದಂತೆ !
ಭಾವಕೊಳಪಡದಂತೆ ಅಳತೆಗಳವಡದಂತೆ
ಆ ವಿಶೇಷಕೆ ಮಣಿಯೊ–ಮಂಕುತಿಮ್ಮ ॥ —ಡಿ.ವಿ.ಜಿ.

ಜೀವ ಹಾಗೂ ಜಡವೆಂಬ ಎರಡು ಪ್ರಭೇದಗಳುಳ್ಳ ಈ ಪ್ರಪಂಚವನ್ನು ಒಂದು ಅಗೋಚರವಾದ ಶಕ್ತಿ ಆವರಿಸಿಕೊಂಡಿದೆ. ಅದನ್ನು ಭಾವಿಸಿ, ತಿಳಿಯಲು ಸಾಧ್ಯವಿಲ್ಲ, ಅಳತೆಯಲ್ಲಿ ಹಿಡಿದು ಇಷ್ಟೇ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಆದರೆ, ಅದಕ್ಕೆ ಶ್ರದ್ಧೆಯಿಂದ ನಮಿಸಿ ಅದರ ವಿಶೇಷತೆಗೇ ಬೆರಗಾಗಬಹುದು.

## ಗುರುಮಹಿಮೆ



✣ ಜನನ ಮರಣಾತೀತ ಜೀವನಕ್ಕೆ ಗುರು ಶಿಷ್ಯನಿಗೆ ಮಾರ್ಗ ತೋರುವನು. ಅವನನ್ನು ಎಲ್ಲಾ ಅಪಾಯಗಳಿಂದಲೂ ಪಾರು ಮಾಡುವನು. ಗುರುವಿನ ಮಾತಿನಲ್ಲಿ ಶ್ರದ್ಧೆ ಇಟ್ಟು ಅವನು ಹೇಳಿದಂತೆ ಮಾಡಲಿ. ಕೆಲವು ಕಾಲದ ಮೇಲೆ ಮನಸ್ಸಿನ ಕಲ್ಮಶ ಮಾಯವಾಗಿ ಭಗವಂತನ ಜ್ಯೋತಿ ಪ್ರಕಾಶವಾಗುವುದನ್ನು ನೋಡುವನು.

✣ ಸಿದ್ಧಗುರುವಿನ ಮೇಲೆ ಇಡುವ ಶ್ರದ್ಧೆಯಿಂದ ಎಲ್ಲವನ್ನೂ ಸಾಧಿಸಬಹುದು. ಅಂತಹ ಗುರುವನ್ನು ಭೂಮಿಯ ಮೇಲೆ ಇರುವ ಭಗವಂತನ ಅವತಾರವೆಂದು ಶಿಷ್ಯ ಭಾವಿಸಬೇಕು. ಅನವರತ ಗುರುಧ್ಯಾನದಿಂದ ಶಿಷ್ಯನ ಮನಸ್ಸು ದೇಹ ಶುದ್ಧವಾಗುವುದು. ನಂತರ ಶಿಷ್ಯನೆದುರಿಗೆ ಗುರು ಪ್ರತ್ಯಕ್ಷನಾಗಿ ಅವನ ಇಷ್ಟದೇವತೆಯನ್ನು ತೋರಿ ಮಾಯವಾಗುವನು.

✣ ಶಿಷ್ಯನಿಗೆ ಗುರುವಿನಲ್ಲಿ ಅಚಲ ಶ್ರದ್ಧೆ ಇದ್ದರೆ ಜ್ಞಾನ ಭಕ್ತಿಯನ್ನು ಪಡೆಯುವುದು ಸುಲಭ. ಮುಖ್ಯವಾಗಿ ಬೇಕಾಗಿರುವುದು ಭಕ್ತಿ. ಇದೊಂದು ಸಿದ್ಧಿಸಿದರೆ ಎಲ್ಲಾ ಸಿದ್ಧಿಸಿದಂತೆ. ಭಗವದ್ದರ್ಶನ ಪಡೆದವನು ಮಾತ್ರ ಮತ್ತೊಬ್ಬನಿಗೆ ಮುಕ್ತಿ ಮಾರ್ಗವನ್ನು ತೋರಬಲ್ಲ. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿಲ್ಲವೋ, ಅವನ ಅಪ್ಪಣೆ ಇಲ್ಲವೋ, ಭಗವಂತನ ಶಕ್ತಿಯಿಂದ ಪೋಷಿತನಾಗಿಲ್ಲವೋ ಅಂತಹವನು ಭವಬಂಧನದಿಂದ ಮತ್ತೊಬ್ಬನನ್ನು ಹೇಗೆ ಪಾರು ಮಾಡಬಲ್ಲ? ಕುರುಡನಿಗೆ ಕುರುಡ ಮಾರ್ಗದರ್ಶಕನಾದರೆ ಇಬ್ಬರಿಗೂ ದುಃಖ ಖಂಡಿತ. ಭಗವತ್ಸಾಕ್ಷಾತ್ಕಾರವಾದರೆ ಮಾತ್ರ ಒಬ್ಬನಿಗೆ ಅಂತರ್ದರ್ಶನ ಸಾಧ್ಯ. ಆಗ ಮಾತ್ರ ಒಬ್ಬನಿಗೆ ಮತ್ತೊಬ್ಬನ ಕಷ್ಟ ತಿಳಿದು ಸರಿಯಾದ ಬುದ್ಧಿವಾದವನ್ನು ಕೊಡಬಲ್ಲ.

✣ ಭಗವಂತನ ಮೇಲೆ ನಿಜವಾದ ಭಕ್ತಿ ಇದ್ದು ಆಧ್ಯಾತ್ಮಿಕ ಜೀವನದಲ್ಲಿ ನಡೆಯಬೇಕೆಂಬ ಕಾತರವಿದ್ದರೆ, ಭಗವಂತನ ದಯೆಯಿಂದ ಅಂತಹವನಿಗೆ ಒಬ್ಬ ನಿಜವಾದ ಗುರು ದೊರಕುವುದರಲ್ಲಿ ಸಂದೇಹವಿಲ್ಲ.

✣ ನೀನು ಎಷ್ಟು ಓದಿದರೂ ಕೇಳಿದರೂ ಸಾಧುಸಂಗದಿಂದ ಮನಸ್ಸಿನ ಮೇಲೆ ಆಗುವಷ್ಟು ಪರಿಣಾಮ ಮತ್ತು ಉಪಯೋಗ ಬೇರೆ ಯಾವುದರಿಂದಲೂ ಆಗುವುದಿಲ್ಲ. ಪ್ರತಿದಿನವೂ ಅವರನ್ನು ನೋಡಿ ನಾವು ಕಲಿಯುವೆವು.

✣ ಸಾಧುಪುರುಷರೊಂದಿಗೆ ಬಹಳ ಸಲಿಗೆಯಿಂದ ವರ್ತಿಸಬೇಕು. ನಿನ್ನ ಮನಸ್ಸಿನಲ್ಲಿ ನೀನೇ ಬಗೆಹರಿಸಲಾಗದ ಸಂಶಯವಿದ್ದರೆ ಅವರಿಗೆ ನಿಸ್ಸಂಕೋಚವಾಗಿ ಹೇಳಿ ನಿವಾರಿಸಿಕೊಳ್ಳಲು ಯತ್ನಿಸು. ವಿಶದವಾಗಿ ಅವರ ಜೀವನವನ್ನು ಗಮನಿಸಬೇಕು. ಅವರ ಜೀವನವನ್ನು ಮಾದರಿಯಾಗಿಟ್ಟುಕೊಂಡು ನಿನ್ನ ಜೀವನವನ್ನು ತಿದ್ದಿಕೊಳ್ಳಬೇಕು. – ಸ್ವಾಮಿ ಬ್ರಹ್ಮಾನಂದ